# ಶಿರಸಿ

# ಶೈಕ್ಷಣಿಕ

# ಜಿಲ್ಲೆಯ

# ಸಂಕ್ಷಿಪ್ತ

# ಪಕ್ಷಿನೋಟ

ಜಿಲ್ಲಾ ಪಂಚಾಯತ ಉತ್ತರ ಕನ್ನಡ

**ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರ ಕಾರ್ಯಾಲಯ ಶಿರಸಿ**

*Office No: 08384236212* *Email.id.- sirsidd34@gmail.com*

*Fax No : 08384223441* *sirsiddpi@gmail.com*

# ಜಿಲ್ಲೆಯ ಕಿರು ಪರಿಚಯ

"ಕರ್ನಾಟಕದ ಕಾಶ್ಮೀರ" ಎಂದು ಪ್ರಸಿದ್ಧವಾಗಿರುವ ಉತ್ತರ ಕನ್ನಡ ಜಿಲ್ಲೆಯ ನೈಸರ್ಗಿಕವಾಗಿ ಸೌಂದರ್ಯಾತಿಸಯದಿಂದ ಕೂಡಿದೆ. ಕಣ್ಮನ ತುಂಬುವ ಕಾರವಾರದ ಕಡಲು, ನೋಡುಗರ ಮೈ ಮರೆಸುವ ಸಹ್ಯಾದ್ರಿ ಶ್ರೇಣಿ, ಮನದಾನಂದಕರ ಮಾಗೋಡು ಜಲಪಾತ ಮೊದಲಾದವುಗಳು ಈ ಜಿಲ್ಲೆಯ ಸೊಬಗಿನ ಸೆರೆಮನೆಗಳು.

**ಪೌರಾಣಿಕ ಹಿನ್ನೆಲೆ:-**

ಸ್ಕಂದ ಪುರಾಣದಲ್ಲಿ ಬರುವ "ಭಾರ್ಗವಸೃಷ್ಠಿ" ಕಥೆಯು ಈ ಜಿಲ್ಲೆಯ ಕರಾವಳಿ ಪ್ರದೇಶದ ಹುಟ್ಟನ್ನು ಹೇಳುತ್ತದೆ. ಕ್ಷತ್ರಿಯರನ್ನೆಲ್ಲ ಗೆದ್ದು ಬ್ರಾಹ್ಮಣರಿಗೆ ದಾನವಾಗಿ ನೀಡಿದ ಪರಶುರಾಮನು ತನ್ನ ವಾಸಕ್ಕಾಗಿ ಪರಶು (ಕೊಡಲಿ)ವನ್ನೆಸೆದು ಸಮುದ್ರವನ್ನು ಹಿಂದೆ ಸರಿಸಿ ಕರಾವಳಿಯನ್ನು ಪಡೆದನು ಎಂಬುದು ಕಥೆ.

**ಐತಿಹಾಸಿಕ ಹಿನ್ನೆಲೆ:-**

ದಕ್ಷಿಣ ಭಾರತವು ಮೌರ್ಯ ಸಾಮ್ರಾಜ್ಯಕ್ಕೊಳಪಟ್ಟ ಸಮಯದಲ್ಲಿ ಈ ಜಿಲ್ಲೆಯೂ ಅದರಲ್ಲಿ ಸೇರ್ಪಡೆಯಾಗಿತ್ತು. ಶಾತವಾಹನರು ಹಾಗೂ ಪಲ್ಲವರು ಈ ಭೂಪ್ರದೇಶವನ್ನು ಆಗ ಆಳುತ್ತಿದ್ದರು. ಬನವಾಸಿಯಲ್ಲಿ ಕಂಡುಬಂದ ಶಾತವಾಹನರ ಕಾಲದ ಪುರಾತನ ಅವಶೇಷಗಳು ಈ ಅಂಶವನ್ನು ತಿಳಿಸಿದೆ. ಕ್ರಿ.ಶ. ಸುಮಾರು 78 ನೇ ಇಸ್ವಿಯಲ್ಲಿ ಭೂತಾಳಪಾಂಡ್ಯನು ಗೋಕರ್ಣ ಮಂಡಲಾಧೀಶ್ವರ ಎಂಬ ಬಿರುದು ಧರಿಸಿ ಈ ಜಿಲ್ಲೆಯ ಕೆಲವು ಭೂಪ್ರದೇಶವನ್ನು ಆಳಿದನು. ಪಾಂಡ್ಯರು ಕದಂಬ ಹಾಗೂ ಶಾತವಾಹನರ ಸಾಮಂತ ಅರಸರಾಗಿ ಕ್ರಿ.ಶ.393 ರ ವರೆಗೆ ಆಳಿದವರಾಗಿದ್ದಾರೆ. ಕರ್ನಾಟಕದಲ್ಲಿರುವಂತೆ ಈ ಜಿಲ್ಲೆಯಲ್ಲಿ ಕದಂಬರ ಆಳ್ವಿಕೆ ಆರಂಭವಾದುದು ಕ್ರಿ.ಶ. ಸುಮಾರು 280 ರಿಂದ. ಹೀಗೆ ಬೇರೆ ಬೇರೆ ಅರಸರ ಆಳ್ವಿಕೆಯಿಂದ ಮುಂದುವರಿದು ವಿಜಯನಗರ ಸಾಮ್ರಾಜ್ಯ ಪತನವಾದ ನಂತರ ಈ ಜಿಲೆಯ ಘಟ್ಟದ ಸೀಮೆಯನ್ನು ಸ್ವಾದಿ ಅರಸರು ಹಾಗೂ ಕರಾವಳಿ ಪ್ರದೇಶವನ್ನು ಬೀದನೂರಿನ ನಾಯಕರು ಆಳಿದರು ಎಂದು ದಾಖಲೆಗಳು ತಿಳಿಸುತ್ತವೆ. ಈ ಜಿಲ್ಲೆಯ ಪ್ರಥಮ ಸ್ವಾತಂತ್ರ್ಯ ವೀರನಾದ ಬೀದನೂರಿನ ಶಿವಪ್ಪ ನಾಯಕನು ಕ್ರಿ.ಶ. 1645 ರಿಂದ ಕ್ರಿ.ಶ. 1660 ರ ವರೆಗೆ ಆಳಿದನು. ಮುಂದೆ ಸ್ವಾದಿ ಹಾಗೂ ಬೀದನೂರು ಕ್ರಿ.ಶ. 1762 ರಲ್ಲಿ ಹೈದರಾಲಿಯ ವಶವಾಯಿತು. ಹೈದರನ ಮಗ ಟಿಪ್ಪುಸುಲ್ತಾನನನ್ನು ಕ್ರಿ.ಶ.1799 ರಲ್ಲಿ ಆಂಗ್ಲರು ಸೋಲಿಸಿ ಮದ್ರಾಸ್ ಇಲಾಖಾ ಆಡಳಿತಕ್ಕೆ ಒಪ್ಪಿಸಿದರು. ಕ್ರಿ. ಶ. 1862 ರಲ್ಲಿ ಬಾಂಬೆ ಸರಕಾರದ ಆಳ್ವಿಕೆಗೆ ಒಳಪಟ್ಟು ಸ್ವತಂತ್ರ ಭಾರತದ ಮೈಸೂರು ರಾಜ್ಯದ ವ್ಯಾಪ್ತಿಗೆ ಕ್ರಿ.ಶ. 1947 ರಲ್ಲಿ ಒಳಪಟ್ಟಿತು. ಬ್ರಿಟೀಷರಿಂದ "ನೊರ್ತ್ ಕೆನರಾ" ಆಗಿದ್ದ ಈ ಜಿಲ್ಲೆಯನ್ನು ರಾಜ್ಯ ಸರಕಾರವು ಕ್ರಿ.ಶ. 1977 ರಲ್ಲಿ ಉತ್ತರ ಕನ್ನಡ ಎಂದು ಹೆಸರಿಸಿತು. ಕ್ರಿ. ಶ. 1800 ರ ವರೆಗೆ ಕುಂದಾಪುರವು ಈ ಜಿಲ್ಲೆಗೆ ಸೇರಿತ್ತು. ಈಗ ಅದು ಉಡುಪಿ ಜಿಲ್ಲೆಗೆ ಸೇರಿದೆ. ಹೀಗೆ ಈ ಜಿಲ್ಲೆಯು ಕಾಲಕಾಲಕ್ಕೆ ರಾಜಕೀಯ ನಕ್ಷೆಯಿಂದ ಬದಲಾಗುತ್ತ ಸಾಗಿದೆ. ಈಗ ಈ ಜಿಲ್ಲೆಯು 10,317 ಚ.ಕಿ.ಮೀ. ಕ್ಷೇತ್ರವ್ಯಾಪ್ತಿಯನ್ನು ಹೊಂದಿದೆ ಎಂದು ಹೇಳಬಹುದಾಗಿದೆ. ಕರಾವಳಿ, ಮಲೆನಾಡು ಹಾಗೂ ಅರೇ ಮಲೆನಾಡು(ಬಯಲುಸೀಮೆ) ಪ್ರದೇಶಗಳನ್ನು ಒಳಗೊಂಡ ರಾಜ್ಯ ಏಕೈಕ ಜಿಲ್ಲೆ ಇದಾಗಿದೆ.

**ಜಿಲ್ಲೆಯ ತಾಲೂಕುಗಳು:-**

ಕಾರವಾರ, ಅಂಕೋಲಾ, ಕುಮಟಾ, ಹೊನ್ನಾವರ, ಭಟ್ಕಳ, ಶಿರಸಿ, ಸಿದ್ದಾಪುರ, ಯಲ್ಲಾಪುರ, ಮುಂಡಗೋಡ, ಹಳಿಯಾಳ ಹಾಗೂ ಜೊಯಡಾ ಹೀಗೆ 11 ತಾಲೂಕುಗಳು ಈ ಜಿಲ್ಲೆಯಲ್ಲಿವೆ ಶೈಕ್ಷಣಿಕ ಆಡಳಿತದ ಹಿತದೃಷ್ಟಿಯಿಂದ ಈ ಜಿಲ್ಲೆಯನ್ನು ಸರ್ಕಾರಿ ಆದೇಶ ಸಂಖ್ಯೆ ಇಡಿ:27 ಯೊಯೊಕಾ 2009 ದಿನಾಂಕ 26/08/2009 ರ ಪ್ರಕಾರ 2 ಶೈಕ್ಷಣಿಕ ಜಿಲ್ಲೆಗಳನ್ನಾಗಿ ಮಾಡಿದ್ದು ಶಿರಸಿ ಸಿದ್ದಾಪುರ ಯಲ್ಲಾಪುರ ಮುಂಡಗೋಡ ಹಳಿಯಾಳ ಹಾಗೂ ಜೊಯಡಾ ಹೀಗೆ 6 (ಆರು) ತಾಲೂಕುಗಳನ್ನು ಸೇರಿಸಿ ಶಿರಸಿ ಶೈಕ್ಷಣಿಕ ಜಿಲ್ಲೆಯನ್ನಾಗಿ ಮಾಡಲಾಗಿದೆ. ದಿನಾಂಕ 01/10/2009 ರಂದು ಶಿರಸಿ ಶೈಕ್ಷಣಿಕ ಜಿಲ್ಲೆಯು ಅಧಿಕೃತವಾಗಿ ಪ್ರಾರಂಭವಾಗಿರುತ್ತದೆ.

**ಜನಾಂಗ, ಕಲೆ, ಸಂಸ್ಕೃತಿ:**

ಉತ್ತರ ಕನ್ನಡ ಜಿಲ್ಲೆಯಲ್ಲಿ ಹಿಂದೂ, ಮುಸ್ಲಿಮ್, ಕ್ರೈಸ್ತ, ಜೈನ್, ಮೊದಲಾದ ಧರ್ಮೀಯರು ಇದ್ದಾರೆ. ಹಿಂದುಗಳಲ್ಲೇ ಹವ್ಯಕ, ಕೊಮಾರ, ಅಂಬಿಗ, ನಾಡವರು, ನಾಮಧಾರಿ, ಕುಂಬಾರ, ಹರಕಾಂತರು, ಕರೇಒಕ್ಕಲಿಗ, ಪಟಗಾರ, ಹಾಲಕ್ಕಿ ಒಕ್ಕಲಿಗೆ, ಆಗೇರ, ಹಳ್ಳೇರ ಹೀಗೆ ಸುಮಾರು ಐವತ್ತಕ್ಕೂ ಹೆಚ್ಚು ಜಾತಿಗಳಿವೆ. ಹಾಗಾಗಿ ಇದೊಂದು ಭಾರತದ ಭಾಗವಾದರೂ ಪುಟ್ಟ ಭಾರತವೇ ಆಗಿದೆ. ಜಾತಿಗಳು ಇರುವಂತೆ ಅವುಗಳದ್ದೇ ಆದ ವಿಭಿನ್ನ ಕಲೆ ಹಾಗೂ ಸಂಸ್ಕೃತಿಗಳೂ ಇವೆ ಎನ್ನುವುದು ಗಮನಾರ್ಹ. ಯಕ್ಷಗಾನವು ಇಲ್ಲಿ ಪ್ರಸಿದ್ಧ ಜನಪರ ಜನಪದ ಕಲೆಯಾಗಿದೆ. ಕೋಲಾಟ, ಸುಗ್ಗಿ ಕುಣಿತ, ಗುಮಟೆಪಾಂಗ್, ಜೋಗೀಪದ, ಸೋಬಾನೆ ಹಾಡುಗಳು ಮೊದಲಾದವುಗಳು ಈ ಜಿಲ್ಲೆಯ ಜೀವನಾಡಿಯಾಗಿವೆ.

ಈ ಜಿಲ್ಲೆಯಲ್ಲಿ ಸಿದ್ದಿ, ಕುಣಬಿ, ಗೊಂಡ, ಗೌಳಿ ಹಾಗೂ ಹಾಲಕ್ಕಿಗರು ಬುಡಕಟ್ಟು ಜನಾಂಗಕ್ಕೆ ಸೇರಿದವರಾಗಿರುತ್ತಾರೆ. 2001 ರ ಜನಗಣತಿಯಂತೆ ಈ ಜಿಲ್ಲೆಯಲ್ಲಿ 686879 ಪುರುಷರು ಹಾಗೂ 666768 ಮಹಿಳೆಯರು ಹೀಗೆ ಒಟ್ಟು 1353644 ಜನಸಂಖ್ಯೆ ಇರುತ್ತದೆ. ಸರಾಸರಿ 2835 ಮಿ.ಮೀ. ಮಳೆ ಬೀಳುತ್ತಿದ್ದು ಅತೀ ಹೆಚ್ಚು ಭಟ್ಕಳ ದಲ್ಲಿ (4015 ಮಿ.ಮೀ) ಅತೀ ಕಡಿಮೆ ಮುಂಡಗೋಡ ದಲ್ಲಿ (1296 ಮಿ.ಮೀ.) ಮಳೆಯಾಗುತ್ತದೆ. ಬೇಸಿಗೆಯಲ್ಲಿ ಕನಿಷ್ಠ ಉಷ್ಣಾಂಶ 33 ಡಿಗ್ರಿ ಹಾಗೂ ಚಳಿಗಾಲದಲ್ಲಿ ಕನಿಷ್ಠ ಉಷ್ಣಾಂಶ 20 ಡಿಗ್ರಿ ಇರುತ್ತದೆ.

**ಜಿಲ್ಲೆಯ ಪ್ರಮುಖ ನದಿಗಳು:**

ಕಾಳಿನದಿ, (ಕಾರವಾರ ಹಾಗೂ ಜೊಯಡಾ), ಗಂಗಾವಳಿ ನದಿ (ಅಂಕೋಲಾ, ಯಲ್ಲಾಪುರ) ಅಘನಾಶಿನಿ ನದಿ (ಕುಮಟಾ, ಸಿದ್ದಾಪುರ), ಶರಾವತಿ ನದಿ(ಹೊನ್ನಾವರ), ವೆಂಕಟಾಪುರ ನದಿ (ಭಟ್ಕಳ) ವರದಾ ನದಿ (ಶಿರಸಿ) ಇವು ಪ್ರಮುಖ ನದಿಗಳು.

# ಶಿರಸಿ ಶೈಕ್ಷಣಿಕ ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಸಂಕ್ಷಿಪ್ತ ವಿವರ

1) ಉಪನಿರ್ದೇಶಕರ ಕಛೇರಿಯ ಸಿಬ್ಬಂದಿ ವಿವರ

| ಅನಂ | ಹುದ್ದೆಯ ವಿವರ | ಮಂಜೂರಿ | ವರ್ಕಿಂಗ್ | ಖಾಲಿ |
|---|---|---|---|---|
| 1 | ಉಪನಿರ್ದೇಶಕರು (ಆಡಳಿತ) | 1 | 1 | 0 |
| 2 | ಶಿಕ್ಷಣಾಧಿಕಾರಿಗಳು | 2 | 2 | 0 |
| 3 | ಡಿವೈಪಿಸಿ ಎಸ್‌ಎಸ್‌ಎ ಶಿರಸಿ | 1 | 1 | 0 |
| 4 | ಡಿವೈಪಿಸಿ ಆರ್‌ಎಂಎಸ್ ಶಿರಸಿ | 1 | 1 | 0 |
| 5 | ಶಿಕ್ಷಣಾಧಿಕಾರಿಗಳು (ಮ.ಊ.ಯೋ) | 1 | 1 | 0 |
| 6 | ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿಗಳು | 1 | 0 | 1 |
| 6 | ವಿಷಯ ಪರಿವೀಕ್ಷಕರು | 5 | 4 | 1 |
| 7 | ಎಪಿಸಿ | 2 | 1 | 1 |
| 8 | ವೃತ್ತಿ ವಿಷಯ ಪರಿವೀಕ್ಷಕರು | 1 | 1 | 0 |
| 9 | ವ್ಯವಸ್ಥಾಪಕರು | 1 | 1 | 0 |
| 10 | ಅಧೀಕ್ಷಕರು | 2 | 2 | 0 |
| 11 | ಪ್ರದಸ | 9 | 9 | 0 |
| 12 | ದ್ವಿದಸ | 3 | 3 | 0 |
| 13 | ಬೆರಳಚ್ಚುಗಾರ | 1 | 0 | 1 |
| 14 | ಡಿ ದರ್ಜೆ | 7 | 5 | 2 |
| | ಒಟ್ಟು | 38 | 32 | 6 |

2) ಶಾಲೆಗಳ ವಿವರ:-

| ಶಾಲೆಗಳ ವಿಧ | ಪ್ರಾಥಮಿಕ | ಪ್ರೌಢ | ಒಟ್ಟು |
|---|---|---|---|
| ಸರ್ಕಾರಿ | 1133 | 74 | 1207 |
| ಸಮಾಜ ಕಲ್ಯಾಣ ಇಲಾಖೆ | 8 | 37 | 45 |
| ಸ್ಥಳಿಯ ಸಂಸ್ಥೆ | 0 | 0 | 0 |
| ಅನುದಾನಿತ | 15 | 58 | 73 |
| ಅನುದಾನ ರಹಿತ | 48 | 28 | 76 |
| ಸೆಂಟ್ರಲ್ | 0 | 6 | 6 |
| ಒಟ್ಟು | 1204 | 203 | 1407 |

3) ಮಕ್ಕಳ ವಿವರ (ಕೆ.ಡಿ.ಪಿ):- ಜನವರಿ 2018

| ತರಗತಿ | ಮಕ್ಕಳ ದಾಖಲಾತಿ | ಹಾಜರಾತಿ | ಶೇ. ಹಾಜರಿ |
|---|---|---|---|
| 1 ರಿಂದ 5 | 55130 | 54778 | 99.36% |
| 6 ರಿಂದ 8 | 34650 | 33612 | 97% |
| 9 ರಿಂದ 10 | 20775 | 20376 | 98.07% |
| 1 ರಿಂದ 10 | 110555 | 108766 | 98.38% |

4) ಶಿಕ್ಷಕರ ಹುದ್ದೆಗಳು ಮಂಜೂರಿ ಮತ್ತು ಖಾಲಿ ಹುದ್ದೆಗಳ ವಿವರ:-

| ವಿವರ | ಮಂಜೂರಿ | ಕಾರ್ಯನಿರ್ವಹಿಸುತ್ತಿರುವವರು | ಖಾಲಿ |
|---|---|---|---|
| ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರು | 3763 | 3295 | 468 |
| ಸರ್ಕಾರಿ ಪ್ರೌಢ ಶಾಲಾ ಶಿಕ್ಷಕರು | 734 | 635 | 99 |
| ಒಟ್ಟು | 4497 | 3930 | 567 |

**5) 2017-18 ನೇ ಸಾಲಿನಲ್ಲಿ ಸರಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಅತಿಥಿ ಶಿಕ್ಷಕರ ನೇಮಕಾತಿ:-**

1. ಸರಕಾರಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ 468 ಹುದ್ದೆಗಳಲ್ಲಿ 39 ಅತಿಥಿ ಶಿಕ್ಷಕರ ನೇಮಕಾತಿ ಮಾಡಲಾಗಿದೆ ಹಾಗೂ 10 ರಿಜರ್ವ ಶಿಕ್ಷಕರನ್ನು ನೇಮಿಸಲಾಗಿದೆ

2. ಸರಕಾರಿ ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ 99 ಹುದ್ದೆಗಳಲ್ಲಿ 30 ಅತಿಥಿ ಶಿಕ್ಷಕರ ನೇಮಕಾತಿ ಮಾಡಲಾಗಿದೆ.

6) ಸನ್ 2017-18 ನೇ ಸಾಲಿಗೆ ಪದವಿಧರ ಪ್ರಾಥಮಿಕ ಶಾಲಾ ಶಿಕ್ಷಕರು (ಎಜಿಟಿ) 217 ಹುದ್ದೆಗಳನ್ನು ಭರ್ತಿ ಮಾಡುವ ಕುರಿತು ಕ್ರಮಕೈಕೊಳ್ಳಲಾಗಿದೆ.

7) ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಫಲಿತಾಂಶ ವಿವರ.

| ವರ್ಷ | ಪರೀಕ್ಷೆಗೆ ಕುಳಿತವರು | ಉತ್ತೀರ್ಣರಾದವರು | ಪ್ರತಿಶತ ಸಾಧನೆ | ರಾಜ್ಯ ಮಟ್ಟದ ರ್‍ಯಾಂಕ |
|---|---|---|---|---|
| 2015-16 | 10023 | 8574 | 85.54 | 9 |
| 2016-17 | 9862 | 7898 | 80.09 | 4 |

ಉಪನಿರ್ದೇಶಕರು(ಆ)
ಸಾರ್ವಜನಿಕ ಶಿಕ್ಷಣ ಇಲಾಖೆ,
ಶಿರಸಿ ಶೈಕ್ಷಣಿಕ ಜಿಲ್ಲೆ ಶಿರಸಿ(ಉ.ಕ)